



ಮತ್ತೆ ಬಂದರೆ? ಇಲ್ಲ, ಹಾಗೇನಾಗಲಿಲ್ಲ. ನಿಧಾನಕ್ಕೆ ಚೇತರಿಸಿಕೊಂಡ ಹುಡುಗ. ಒಂದೊಂದಾಗಿ ದಿನಗಳು ಕಳೆದು ಹೋಗಿ ಎರಡುವಾರಗಳ ದೀರ್ಘಾವಧಿ ಮುಗಿಯಿತು ಎಂದು ಹೇಳಿದರೆ ಅದು ಹೇಳಿದಷ್ಟು ಸಲೀಸಾಗಿ ಕಳೆಯಲಿಲ್ಲ. ದಿನವೂ ಒಂದೊಂದು ಅನುಭವ. ಭಯ. ವಿಷಜಂತುಗಳು ಓಡಾಡುವ ಜಾಗದಲ್ಲಿ ಆಶ್ರಯ ಪಡೆದವರು ನೆಮ್ಮದಿಯಾಗಿರಲು ಹೇಗೆ ಸಾಧ್ಯ? ಬಾಗಿಲಾಚೆಗೆ ಹಾವುಗಳು ಕಾಣಿಸಿಕೊಳ್ಳುವುದಿರಲಿ, ನರ್ಮದೆಯ ಕನಸಲ್ಲೂ ಹಾವುಗಳ ಮೆರವಣಿಗೆ. 'ನಮ್ಮ ವೈರಿಗಳಿಗೂ ಇಂತಾ ಕಷ್ಟ ಬೇಡ. ಜೀವ ಹೋದ್ರೂ ಸರಿ, ಇನ್ನೊಂದು ಸಲ ಇಂತಾ ಕಾಡಂಚಿನಲ್ಲಿ ಸಿಕ್ಹಾಕ್ಕೊಳ್ಳೋದು ಬೇಡ' ಎನ್ನುವ ನರ್ಮದೆಯ ಮಾತು ರಾಜೀವನ ಒಳದನಿಯೂ ಆಗಿತ್ತು.

ಕೊನೆಯ ದಿನದ ಆ ಗಡುವು ಮುಗಿದು, ಕರೆಯಲು ಬಂದಾನೆಯೇ ಅಣ್ಣ? ಕಾದಿದ್ದಾಳೆಯೇ ಅಮ್ಮ? ಮಧ್ಯಾಹ್ನದವರೆಗೆ ನಿರೀಕ್ಷೆ ಮಾಡಿ ತಾವೇ ಊರೊಳಗೆ ಹೋಗುವ ನಿರ್ಧಾರಕ್ಕೆ ಬಂದರು ದಂಪತಿ. ಅಷ್ಟೈಶ್ವರ್ಯದ ತಮ್ಮ ಗಂಟುಗಳಷ್ಟನ್ನೂ ಹೊತ್ತು ಹೋಗಲಾಗದ ಪರಿಸ್ಥಿತಿಯಲ್ಲಿ ಹೊರಲು ಸಾಧ್ಯವಾದಷ್ಟನ್ನೇ ಹೊತ್ತುಕೊಂಡ ರಾಜೀವ. ನರ್ಮದೆಯ ಸೊಂಟದಲ್ಲಿ ಸಮೀರ. ಬಲಗೈಯಲ್ಲೊಂದು ಚೀಲ. ವಿಚಿತ್ರ ದುಗುಡದಲ್ಲಿ ಮೈಲಿ ದೂರ ನಡೆದು, ಎದುರು ಸಿಕ್ಕ ಪರಿಚಿತರು ಮುಖ ಕೊಟ್ಟು ಮಾತಾಡುವುದಿರಲಿ, ಪರಿಚಯದ ನಗೆಗೂ ಚೌಕಾಶಿ ಮಾಡಿದರು. 'ಬಾರೋ ಕಾಫಿಗೆ... ಬಾರೋ ತಿಂಡಿಗೆ...' ಎನ್ನುವ ಆದರದ ಆಹ್ವಾನಗಳೆಲ್ಲಾ ಯಾವುದೋ ಗತಕಾಲದ ನೆನಪುಗಳೆಂಬಂತೆ ತೋರಿ ರಾಜೀವ ವಿಷಣ್ಣನಾದ. ಪ್ರಸ್ತುತದ ಕಾಲಮಾನ ತಂದಿಟ್ಟ ದಿಗಿಲು ಪರಿಚಿತರನ್ನೂ ದೂರ ಮಾಡುತ್ತಿರುವ ಕುರಿತು ಅವನಿಗೆ ವಿಸ್ಮಯ. ಇದು ಸರಿಯಾದೀತೇ ಅಥವಾ ಸರಿಯಾಗುವಷ್ಟರಲ್ಲಿ ಮನುಷ್ಯಸಂಬಂಧಗಳು ಪರಸ್ಪರ ಒಡನಾಡುವ ಪ್ರಕ್ರಿಯೆಯಲ್ಲೇ ಬದಲಾವಣೆ ಅಭ್ಯಾಸವಾಗಿಬಿಡುತ್ತದೆಯೇ? ತನ್ನದೇ ಮನೆಯ ವಲಯವನ್ನು ಪ್ರವೇಶಿಸಿದ ರಾಜೀವ ಇಡೀ ಮನೆ ಮೌನದ ಮುಸುಕು ಹೊದ್ದು ತಪಸ್ಸು ಮಾಡುವಂತಿರುವುದನ್ನು ಕಂಡು ಮೆಲ್ಲನೆ ಕದ ಬಡಿದ. ಹಗಲುಹೊತ್ತಿನಲ್ಲಿ ಮುಂಬಾಗಿಲಿಗೆ ಅಗುಳಿ ಹಾಕುವ ಅಭ್ಯಾಸ ಯಾವತ್ತಿನಿಂದ ಆರಂಭವಾಗಿದ್ದೋ? ಕೈಲಿದ್ದ ಹೊರೆಯನ್ನು ಬದಿಗಿಟ್ಟು ಮೊಣಕೈಯಿಂದ ಹಸ್ತದವರೆಗೆ ಇನ್ನೊಂದು ಕೈಯಿಂದ ಒತ್ತಿಕೊಂಡಾಗ ಭಾರ ಹೊತ್ತು ಬಂದ ನೋವು ಕಮ್ಮಿಯಾದಂತೆ